# ಕರ್ನಾಟಕ ವಿಧಾನ ಪರಿಷತ್ತು

(೪)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 192

ಸದಸ್ಯರ ಹೆಸರು : ಶ್ರೀ . ಪಿ. ಆರ್ ರಮೇಶ್ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 14.12.2021

ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 05 ವರ್ಷಗಳಿಂದ ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಇತರೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಂಡ ವಸೂಲಾತಿ ಮಾಡಲಾಗಿದೆಯೇ; ಜಿಲ್ಲಾವಾರು ಮಾಹಿತಿ ನೀಡುವುದು; ವಸೂಲಾದ ದಂಡವನ್ನು ಸರ್ಕಾರದಿಂದ ಯಾವುದಾದರೂ ಗಣಿ ಪರಿಸರ ಪುನಃಶ್ಚೇತನ ಕಾರ್ಯಕ್ರಮಗಳ ಯೋಜನೆಗಳಿಗೆ ವಿನಿಯೋಗಿಸಲಾಗಿದೆಯೇ; (ಜಿಲ್ಲಾವಾರು ವಿವರ ನೀಡುವುದು). | ಕಳೆದ 05 ವರ್ಷಗಳಿಂದ ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಇತರೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಂಡ ವಸೂಲು ಮಾಡಿದ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಪೂರೈಸಲಾಗಿದೆ.<br><br>ಸದರಿ ದಂಡದ ಮೊತ್ತವನ್ನು ಗಣಿ ಪರಿಸರ ಪುನಃಶ್ಚೇತನಕ್ಕೆ ವಿನಿಯೋಗಿಸಲು ಅವಕಾಶ ಇರುವುದಿಲ್ಲ. ಈ ಗಣಿ ಪರಿಸರ ಪುನಃಶ್ಚೇತನಕ್ಕೆ ಕೇಂದ್ರ ಸರ್ಕಾರವು DMFT ನ್ನು ರಚಿಸಿದೆ. ಸದರಿ ನಿಧಿಗೆ ವಂತಿಗೆ ರೂಪದಲ್ಲಿ ಸಂಗ್ರಹವಾಗುವ ಮೊತ್ತವನ್ನು ಆಯಾ ಜಿಲ್ಲೆಯ ಗಣಿ ಪರಿಸರ ಪುನಃಶ್ಚೇತನಕ್ಕೆ ವಿನಿಯೋಗಿಸಲಾಗಿದೆ. |
| ಆ) | ರಾಜ್ಯದಲ್ಲಿ ಕಳೆದ 05 ವರ್ಷಗಳಿಂದ ಗಣಿಗಾರಿಕೆ ಮತ್ತು ಸಂಬಂಧಿಸಿದ ಇತರೆ ಚಟುವಟಿಕೆಗಳಿಂದ ಪರಿಸರ ಹಾನಿಯಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; (ಜಿಲ್ಲಾವಾರು ವಿವರ ನೀಡುವುದು). | ಗಣಿಗಾರಿಕೆ ಚಟುವಟಿಕೆಗಳಿಂದ ಪರಿಸರ ಹಾನಿಯಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.<br><br>ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಅತಿಕ್ರಮ/ಅಕ್ರಮ ಗಣಿಗಾರಿಕೆ ಮಾಡಿದವರಿಂದ ಉಂಟಾದ ಪರಿಸರ ಅಸಮತೋಲವನ್ನು ಮಿತಗೊಳಿಸಲು ವಿಧಿಸಲಾದ ಪರಿಹಾರಾತ್ಮಕ ದಂಡ, ಹಾಗೂ ಅನಧಿಕೃತವಾಗಿ ದಾಸ್ತಾನು ಮಾಡಿದ್ದ ಅದಿರಿನ ಮಾರಾಟದಿಂದ ಬಂದ ಮೊತ್ತವನ್ನು "ಉದ್ದೇಶಿತ ವಿಶೇಷ ವಾಹಕ" (Special Purpose Vehicle) ಕ್ಕೆ ವರ್ಗಾಹಿಸಲಾಗಿದೆ. ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಪರಿಸರ ಪುನಃಶ್ಚೇತನ ಹಾಗೂ ಗಣಿ ಬಾಧಿತ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ವಿನಿಯೋಗಿಸಲು ಯೋಜನೆಯನ್ನು ರೂಪಿಸಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಅಂಕಿತಕ್ಕೆ ನಿರೀಕ್ಷಿಸಲಾಗುತ್ತಿದೆ. ಅನುಮೋದನೆ ದೊರೆತ ನಂತರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. |

| | | |
|---|---|---|
| ಇ) | ಕಳೆದ 05 ವರ್ಷಗಳಿಂದ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳೇನು; ಸದರಿ ಕಾರ್ಯಕ್ರಮಗಳ / ಯೋಜನೆಗಳಿಗೆ ವಿನಿಯೋಗಿಸಲಾದ ವೆಚ್ಚವೆಷ್ಟು; (ಜಿಲ್ಲಾವಾರು/ಪ್ರತ್ಯೇಕ ವಾರ್ಷಿಕವಾರು/ ಕಾರ್ಯಕ್ರಮವಾರು ಮಾಹಿತಿ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ, ರಾಜ್ಯದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶಗಳ ಪರಿಸರ ಅಭಿವೃದ್ಧಿ, ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಗಣಿಗಾರಿಕೆಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಕೈಗೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಚಟುವಟಿಕೆಗಳನ್ನು ಜಿಲ್ಲಾಡಳಿತ ಗುರುತಿಸಿ ಸರ್ಕಾರದ ಮಟ್ಟದಲ್ಲಿ ಕ್ರೊಢೀಕರಿಸಿ, ಒಟ್ಟು ರೂ.24,996.71 ಕೋಟಿ ಮೊತ್ತದ Comprehensive Environment Plan for Mining Impact Zone (CEPMIZ) ಎಂಬ ಕ್ರಿಯಾ ಯೋಜನೆಯನ್ನು ತಯಾರಿಸಿ ಅಕ್ಟೋಬರ್ 2018 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮೋದನೆಗಾಗಿ ಸಲ್ಲಿಸಲಾಗಿದೆ.<br><br>ಈ ಯೋಜನೆಗೆ ಶೀಘ್ರ ನ್ಯಾಯಾಲಯದ ಅನುಮೋದನೆ ಪಡೆಯುವ ಸಂಬಂಧ 3 ಬಾರಿ ಹಿರಿಯ ವಕೀಲರು ಮತ್ತು 7 ಬಾರಿ ಮಾನ್ಯ ಸಾಲಿಸಿಟರ್ ಜನರಲ್ (Solicitor General of India) ರವರು ನ್ಯಾಯಾಲಯದ ಮುಂದೆ ಅರಿಕೆ ಮಾಡಿರುತ್ತಾರೆ. ಅಲ್ಲದೆ, ಕೇಸು ಶೀಘ್ರ ಕೈಗೆತ್ತಿಕೊಳ್ಳುವಂತೆ ಮಾನ್ಯ ನ್ಯಾಯಾಲಯವನ್ನು ಕೋರಿ 7 Mentioning Application ಗಳನ್ನು ಸಲ್ಲಿಸಲಾಗಿದೆ. ನ್ಯಾಯಾಲಯದ ಅನುಮೋದನೆ ನಿರೀಕ್ಷಸಲಾಗುತ್ತಿದೆ.<br><br>ಯೋಜನೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮೋದನೆ ಇನ್ನೂ ದೊರೆಯಬೇಕಾಗಿರುವುದರಿಂದ, ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದಡಿಯಲ್ಲಿ ಈವರೆಗೆ ಯಾವುದೇ ಕಾಮಗಾರಿ/ಯೋಜನೆಗಳನ್ನು ಕೈಗೊಂಡಿರುವುದಿಲ್ಲ. ಅನುಮೋದನೆ ದೊರೆತ ನಂತರ ನ್ಯಾಯಾಲಯ ನೀಡುವ ಆದೇಶದಂತೆ ಯೋಜನೆಯ ಅನುಷ್ಠಾನ ಕಾರ್ಯ ಕೈಗೊಳ್ಳಲಾಗುವುದು. |
| ಈ) | ಕಳೆದ 05 ವರ್ಷಗಳಿಂದ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದಿಂದ ಕೈಗೊಂಡ ಪರಿಸರ ಪುನಃಶ್ಚೇತನ (Restoration) ಯೋಜನೆಗಳಿಗೆ ಸಂಬಂಧಿಸಿದ ಕಾಮಗಾರಿಗಳ ಸ್ಥಳದ ಮೂರು ಹಂತದ ಕಾಮಗಾರಿಗಳ ಪೂರ್ವ, ಪ್ರಗತಿಯಲ್ಲಿರುವ ಮತ್ತು ಮುಕ್ತಾಯದ ನಂತರ (3 State, i.e., Pre, During & Post) ಛಾಯಾಚಿತ್ರಗಳ (GIS/GPS ಮಾಹಿತಿ) ಜೊತೆಗೆ ಭೌತಿಕ, ಆರ್ಥಿಕ ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದ ವಿವರಗಳೇನು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | |

ಸಂಖ್ಯೆ: ಸಿಐ 127 ಸಿಎಂಸಿ 2021

Halappa B.A

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು
ಹಿರಿಯ ನಾಗರೀಕರ ಸಬಲೀಕರಣ ಸಚಿವರು